3. ವಿಶೇಷ ಘಟಕ ಯೋಜನೆ.

ಈ ಯೋಜನೆಯಡಿ ಸಾಮೂಹಿಕ ಅಭಿವೃದ್ಧಿ ಕೇಂದ್ರಗಳ ನಿರ್ವಹಣೆ,ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ರೂ.25000/ ಹೊಸಹಿಪ್ಪುನೇರಳೆ ನಾಟಿಗೆ ಪ್ರೋತ್ಸಾಹಧನ ರೂ.2500/–, ರೇಷ್ಮೆ ಹುಳು ಸಾಕಣೆ ಸಲಕರಣೆಗಳ ಸರಬರಾಜು ರೂ.2500/– ರೀಲರ್ ಗಳಿಗೆ ಚರಕಾ ಸರಬರಾಜು ರೂ.4000/– ಸೇರಿವೆ.

4. ಗಿರಿಜನ ಉಪಯೋಜನೆ.

ಈ ಯೋಜನೆಯಡಿ ಗಿರಿಜನ ಕಾಲೋನಿಗಳ ನಿರ್ವಹಣೆ, ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ರೂ.25000/ ಹೊಸಹಿಪ್ಪುನೇರಳೆ ನಾಟಿಗೆ ಪ್ರೋತ್ಸಾಹಧನ ರೂ. 2500/–, ರೇಷ್ಮೆ ಹುಳು ಸಾಕಣೆ ಸಲಕರಣೆಗಳ ಸರಬರಾಜು ರೂ. 2500/– ಸೇರಿದೆ.

5126 (5740) ಶ್ರೀ ಪ್ರಭಾಕರ ಬಂಗೇರ. ಕೆ (ಬೆಳ್ತಂಗಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಪಂಗಡಗಳ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಸತಿ ಶಾಲೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ;

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಪರಿಶಿಷ್ಟ ಪಂಗಡದ ಜನರು ಹೆಚ್ಚು ಇರುವುದರಿಂದ ಬೆಳ್ತಂಗಡಿಯಲ್ಲಿ ಮೆಟ್ರಿಕ್ ಪೂರ್ವ ವಸತಿ ಶಾಲೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಗ್ರಾಮಾಂತರ ಪ್ರದೇಶಗಳಿಂದ ಹಾಗೂ ಅರಣ್ಯ ಪ್ರದೇಶಗಳಿಂದ ಕೂಡಿದ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪರಿಶಿಷ್ಟ ಪಂಗಡದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೆಟ್ರಿಕ್ ಪೂರ್ವ ವಸತಿ ಶಾಲೆಯನ್ನು ಕೂಡಲೇ ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆ ಯಾವುದು ಇರುವುದಿಲ್ಲ.

ಆ) ಮತ್ತು ಇ)

2005–06ನೇ ಸಾಲಿನಲ್ಲಿ ಹೊಸ 43 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಈ ಪೈಕಿ ಪರಿಶಿಷ್ಟ ಪಂಗಡದವರಿಗಾಗಿ 10 ವಸತಿ ಶಾಲೆಗಳನ್ನು ವರ್ಗೀಕರಿಸಲಾಗಿದೆ. ಈ ಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ತೆರೆಯಬೇಕೆಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ.

5127 (5741) ಶ್ರೀ ಪ್ರಭಾಕರ ಬಂಗೇರ. ಕೆ (ಬೆಳ್ತಂಗಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಮಚ್ಚಿನ ಎಂಬಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಂಜೂರಾದ ಶಿಕ್ಷಕರ ಸಂಖ್ಯೆ ಎಷ್ಟು; ಪ್ರಸ್ತುತ ಎಷ್ಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ; ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಆ) ತಾತ್ಕಾಲಿಕ ನೆಲೆಯಲ್ಲಿ ನೇಮಕಗೊಂಡ ಶಿಕ್ಷಕರುಗಳ ಸಂಖ್ಯೆ ಎಷ್ಟು; ಅವರು ಎಷ್ಟು ಸಮಯದಿಂದ ಕೆಲಸದಲ್ಲಿದ್ದಾರೆ; ಸದರಿ ತಾತ್ಕಾಲಿಕ ಶಿಕ್ಷಕರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಆ ಕುರಿತಾದ ವಿವರಗಳೇನು?

ಇ) ಬೆಳ್ತಂಗಡಿ ತಾಲ್ಲೂಕಿನ ಮುಂಡಾಜಿ ನವೋದಯ ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಈ) ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದ ಸಕಾಲಿಕ ಕ್ರಮಗಳೇನು?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) 1) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಚ್ಚಿನ ಇಲ್ಲಿ ಮಂಜೂರಾಗಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ:11.

2) ಈ ಶಾಲೆಯಲ್ಲಿ ಪ್ರಸ್ತುತ 8 ಮಂದಿ ಶಿಕ್ಷಕರು ಕರಾರು ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

3) ಈ ಶಾಲೆಯಲ್ಲಿ ಕೆಳಕಂಡ 3 ಶಿಕ್ಷಕರ ಹುದ್ದೆಗಳು ಮತ್ರ ಖಾಲಿ ಇವೆ.

(ಅ) ಯೋಗ (ಆ) ಕ್ರಾಫ್ಟ (ಇ) ಗಣಕಯಂತ್ರ

ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಜಿಲ್ಲಾ ಪಂಚಾಯಿತಿಗಳಿಗೆ ಸೂಚನೆ ನೀಡಲಾಗಿದೆ.

ಆ) 1) ಮಚ್ಚಿನ ಶಾಲೆಯಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರ ಸಂಖ್ಯೆ:8

2) ಈ ತಾತ್ಕಾಲಿಕ ಶಿಕ್ಷಕರು 2002 ನೇ ಶೈಕ್ಷಣಿಕ ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಇವರುಗಳ ಕರಾರು ಒಪ್ಪಂದವನ್ನು ಪ್ರತಿ ಶೈಕ್ಷಣಿಕ ವರ್ಷಕ್ಕೆ ನವೀಕರಿಸಲಾಗಿದೆ.

3) ಈ ಶಿಕ್ಷಕರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಇ) ನವೋದಯ ಮಾದರಿ ವಸತಿ ಶಾಲೆ, ಮುಂಡಾಜೆ ಇಲ್ಲಿ 6 ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಾಶುಂಪಾಲರ ಮತ್ತು ಆಂಗ್ಲ ಶಿಕ್ಷಕರ ಹುದ್ದೆಗಳ ಹುದ್ದೆಗಳು ಖಾಲಿ ಇವೆ.

ಈ) ದಿನಾಂಕ: 01.04.2005 ರಿಂದ ಈ ಶಾಲೆಗಳು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ವರ್ಗಾವಣೆಯಾಗಿರುತ್ತದೆ. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ತಾತ್ಕಾಲಿಕವಾಗಿ ಕರಾರು ಒಪ್ಪಂದದ ಮೇಲೆ ಪಸಕ್ತ ಶೈಕ್ಷಣಿಕ ವರ್ಷಕ್ಕೆ ಮಾತ್ರ ಜಿಲ್ಲಾ ಮಟ್ಟದಲ್ಲಿ ಭರ್ತಿ ಮಾಡಿಕೊಳ್ಳಲು ಜಿಲ್ಲಾ ಪಂಚಾಯಿತಿಗಳಿಗೆ ಸೂಚನೆ ನೀಡಲಾಗಿದೆ.

5128 (6102) ಶ್ರೀ ಪ್ರಭಾಕರ ಬಂಗೇರ. ಕೆ (ಬೆಳ್ತಂಗಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಾಲೋನಿಗಳು ಎಷ್ಟು; ಈ ಕಾಲೋನಿಗಳಿಗೆ ಮೂಲಭೂತ ವ್ಯವಸ್ಥೆಗಳಾದ ರಸ್ತೆಗಳ ಡಾಂಬರೀಕರಣ. ಸಮುದಾಯ ಭವನ ಇನ್ನಿತರ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೇ;

ಆ) ಇಲ್ಲವಾದಲ್ಲಿ ಯಾವಾಗ ಒದಗಿಸಿಕೊಡಲಾಗುವುದು;